(ಶ್ರೀ ಡಿ. ದೇವರಾಜ ಅರಸ್)

ಇಲ್ಲ ಎಂದು ನನಗೆ ಗೊತ್ತಿದೆ. ಆದ್ದರಿಂದ ಎಷ್ಟು ಬೇಕಾದರೂ ಗೋಧಿಯನ್ನು ಕಳುಹಿಸಿಕೊಡುತ್ತೇವೆ. ಬಾಜ್ರಾ ಮತ್ತು ಜೋಳ ಕಟ್ಟು ಹೋಗುತ್ತವೆ, ಎಂದು ಟೆಂಡರ್ ಕರೆದು ಕೊಟ್ಟು ಬಿಡಬೇಕೆಂದಿದ್ದೆವು. ಈಗ ಟೆಂಡರ್ ಕರೆದು ಬೇರೆಯವರಿಗೆ ಕೊಡೋಣ ಎಂದು ಇದ್ದುದನ್ನು ನಿಲ್ಲಿಸಿ, ಬಿಜಾಪುರ ಜಿಲ್ಲೆಗೆ ಕಳುಹಿಸಿಕೊಡಿ ಎಂದು ಹೇಳಿದ್ದೇವೆ. ಆಹಾರಧಾನ್ಯಗಳ ಫ್ರೈಸ್ ಜಾಸ್ತಿ ಯಾಗುತ್ತಿರುವುದರಿಂದ ಇದನ್ನು ನಾವು ಹಂಚುವುದಕ್ಕೆ ಬೇಗ ವ್ಯವಸ್ಥೆ ಮಾಡುತ್ತೇವೆಂದು ನಿನ್ನೆಯ ದಿವಸ ಹೇಳಿದ್ದೇನೆ. ಇನ್ನು 10 ಲಕ್ಷ ರೂಪಾಯಿನಲ್ಲಿ ಕಾರ್ಯ ಮಾಡುವುದರ ಜೊತೆಗೆ ಕೆಲವು ಕಡೆ, ನಾರಾ ಕೆಲಸಗಳು ಆಗಬೇಕು. ಕೃಷ್ಣಾ ಯೋಜನೆಯ ಒಳಗಡೆ ಇರತಕ್ಕ ನಾರೆ, ಇಂಡಿಗಿ ತಾಲ್ಲೂಕು ಸಿಂಧಗಿಗೆ ಬರುವುದಿದೆ. ಆ ಭಾಗದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೂಡ ನೋಡಿಸುತ್ತಿದ್ದೇವೆ. ಈ ಕೆಲಸಗಳನ್ನು ಅಲ್ಲಿ ಪುರು ಮಾಡಿದರೆ ಜನರಿಗೆ ಸ್ವಲ್ಪ ಹೆಚ್ಚಾಗಿ ಕೆಲಸ ಸಿಕ್ಕುತ್ತದೆ. ಇನ್ನು ಕೆಲವರು, ನಲಹೆ ಕೊಟ್ಟರು, ಟ್ಯಾಂಕ್ ವರ್ಕ್ಸ್ ಮಾಡುವುದಕ್ಕೆ ಸಾಧ್ಯವಿದೆ ಎಂದು. ಟ್ಯಾಂಕ್ ಕೆಲಸಗಳಿಗೆ ಎಸ್ಟಿಮೇಟ್ಸ್ ಏನು ೀಂದೆ ಆಗಿವೆ ಅವುಗಳನ್ನು ತೆಗೆದು ಕೊಳ್ಳುವ ಪಾಸಿಬಿಲಿಟೀಸ್ ಇದೆಯೇ ಎಂದು ನೋಡಿ, ಸಾಧ್ಯವಾದರೆ ತೆಗೆದುಕೊಳ್ಳೋಣ ಎಂದು ಹೇಳಿದ್ದೇವೆ. ಅವರು ಸುಮ್ಮನೆ ಹೇಳುತ್ತಿದ್ದಾರೆ, ನಮ್ಮ ಪಾಡಿಗೆ ನಾವು ಸುಮ್ಮನೆ ಇದ್ದೇವೆ ಎಂದಲ್ಲ. ಮತ್ತೆ ಮಾನ್ಯ ಸದಸ್ಯರು ಒಂದು ಡಿಫಿಕಲ್ಟಿ ಹೇಳಿದರು. ಡ್ರಿಂಕಿಂಗ್ ವಾಟರ್‌ಗೋಸ್ಕರ ಬೋರ್ ವೆಲ್ಸ್‌ಗಳನ್ನು ತೆಗೆಯುವುದಕ್ಕೆ ಸಾಕಷ್ಟು ರಿಗ್ಸ್ ಇಲ್ಲ, ಈ ಡಿಸ್ಟ್ರಿಕ್ಟ್‌ಗೆ ಕೊಟ್ಟಿದ್ದ ರಿಗ್ಸ್, ಧಾರವಾಡದಲ್ಲಿ ಉಳಿದುಬಿಟ್ಟವೆ, ಅದನ್ನು ತರಿಸಬೇಕು ಎಂದು ಹೇಳಿದರು. ನಾನು ನಿನ್ನೆ ಕಾಂಟ್ಯಾಕ್ಟ್ ಮಾಡಿ, ರಿಗ್ಸ್ ಅನ್ನು ಮೂವ್ ಮಾಡುವುದಕ್ಕೆ ಹೇಳಿದ್ದೇನೆ. ಎಲ್ಲ ತೊಂದರೆ ಇದೆ ಅಲ್ಲ, ಬೋರ್ ವೆಲ್ಸ್ ಹಾಕಿಸಿ, ಕುಡಿಯುವ ನೀರಿನ ವ್ಯವಸ್ಥೆ ಮಾಡೋಣ. ನಿನ್ನೆ ಈ ವಿಷಯದ ಬಗ್ಗೆ ನಿಮ್ಮ ಜಿಲ್ಲೆಯ ಜಿಲ್ಲಾ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ.

ಶ್ರೀ ಜೆ. ಎಸ್. ಕಬ್ಬಾರಿ.—ಡ್ರಾಟ್ ಕಂಡಿಷನ್ ನಲುವಾಗಿ 10 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. ಈ ಹತ್ತು ಲಕ್ಷ ರೂಪಾಯಿ ಎಲ್ಲಾ ಕಡೆ ಕೆಲಸ ಮಾಡುವುದಕ್ಕೆ ಸಾಲುವುದಿಲ್ಲ. ಈಗ ಎಲ್ಲಾ ಭಾಗಗಳನ್ನು ಕವರ್ ಮಾಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಇದು ನಮಗೆ 10 ಲಕ್ಷ ರೂಪಾಯಿ ಕೊಡುವ ಪ್ರಶ್ನೆಯಲ್ಲ, ಎಲ್ಲಾ ಕಡೆ ಕೆಲಸ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಕ್ಷಣ ಆರ್ಡರ್ ಮಾಡಿ, ಎಂದು ಹೇಳುವುದು ಮುಖ್ಯವಾದ ವಿಚಾರವಾಗಿದೆ.

3-00 P.M.

Sri B. B. SAYANAK.—I want to know the law and order situation in Belgaum.

Sri D. DEVARAJ URS.—I will get the report and I will try to see that law and order situation there is brought under control.

Agreement on the Projects over the Cauvery River Basin

†ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಸಭೆಯಲ್ಲಿರುವುದರಿಂದ ಒಂದು ವಿವರಣೆಯನ್ನು ಅವರಿಂದ ತಿಳಿದುಕೊಳ್ಳಬೇಕೆಂದು ಇದ್ದೇನೆ. ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯವರು ಕೇರಳಕ್ಕೆ ಹೋಗಿದ್ದಾರೆ. ಕಮಿಟಿ ಸದಸ್ಯರಾದ ಶ್ರೀ ಅಹುಜಾ ಅವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಕೇಂದ್ರದಿಂದ ಕ್ಲಿಯರ್ ಆಗದೆ ಇರತಕ್ಕ ಪ್ರಾಜೆಕ್ಟ್‌ಗಳನ್ನು ನಿಲ್ಲಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಮತ್ತು ಕಾವೇರಿ ಪ್ರಾಜೆಕ್ಟ್ ಆಗುತ್ತಾ ಇರುವ ವಿಷಯ ಗೊತ್ತಿಲ್ಲ ಎಂದು ಅವರು ತಿಳಿಸಿದ್ದಾರೆ. ಅದಕ್ಕೆ ನಮ್ಮ ರಾಜ್ಯದ ನೀರಾವರಿ ರಾಜ್ಯ ಸಚಿವರು ಮತ್ತು ಮುಖ್ಯಮಂತ್ರಿಗಳು ಹಾಗೆ ಒಪ್ಪಿಗೆ ಕೊಟ್ಟಿಲ್ಲ ಎನ್ನುವುದನ್ನು ಹೇಳಿದ್ದಾರೆ. ಹಿಂದೆ ಪ್ರಸ್ತಾಪ ಮಾಡಿದಾಗ "at the appropriate time I am going to make a statement" ಎಂದು ಹೇಳಿದ್ದಾರೆ. ಇದರಲ್ಲಿ ಸ್ವಲ್ಪ ಗೊಂದಲ ಪ್ರಾರಂಭವಾಗಿದೆ. ಸಂಬಂಧಪಟ್ಟ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಸದಸ್ಯರು, ಮೂರು ರಾಜ್ಯದ ಮುಖ್ಯಮಂತ್ರಿಗಳು ಕಾವೇರಿ ಬೇಸಿನ್‌ನಲ್ಲಿ

ಕ್ಲಿಯರ್ ಆಗದೆ ಇರುವ ಪ್ರಾಜೆಕ್ಟ್‌ಗಳನ್ನು ತಡೆಹಿಡಿಯುತ್ತಾರೆ ಎಂದು ತಿಳಿಸಿದ್ದಾರೆ. ಕಾಕತಾಳ ನ್ಯಾಯ ಇದ್ದಹಾಗೆ ಹೇಮಾವತಿ ಪ್ರಾಜೆಕ್ಟ್‌ನ್ನು ನಾವು ನೋಡಿಕೊಂಡು ಬಂದಿದ್ದೇವೆ, ಪ್ರಾಜೆಕ್ಟ್ ಕೆಲಸ ಸ್ಥಗಿತವಾಗಿದೆ, ಕಾರ್ಯಗಳನ್ನು ನಿಲ್ಲಿಸತಕ್ಕ ಬಗ್ಗೆ ಸರ್ಕಾರ ಪರೋಕ್ಷವಾಗಿ ಆದೇಶ ಕೊಟ್ಟ ಹಾಗೆ ಕಾಣುತ್ತದೆ. ಪರಿಸ್ಥಿತಿ ಹೀಗಿರುವಾಗ ಮುಖ್ಯಮಂತ್ರಿಗಳು ಸಭೆಯಲ್ಲಿ ಈ ಪ್ರಾಜೆಕ್ಟ್ ತಡೆ ಹಿಡಿಯುತ್ತೇವೆ ಎಂದು ಒಪ್ಪಿಕೊಂಡಿರುವುದು ನಿಜವೇ? ಇದನ್ನು ಏಕೆ ಹೇಳುತ್ತೇನೆ ಎಂದರೆ ಕಮಿಟಿ ಸದಸ್ಯರೇ ಈ ಮಾತು ಹೇಳಿದ್ದಾರೆ. ಆದ್ದರಿಂದ ನಮಗೆ ಸ್ಪಷ್ಟವಾಗಿ ಈ ವಿಚಾರದಲ್ಲಿ ಹೇಳಿಕೆ ಕೊಡ ಬೇಕು ಮತ್ತು ನಮ್ಮ ಮನಸ್ಸಿನಲ್ಲಿರುವ ಸಂಶಯವನ್ನು ನಿವಾರಣೆಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಡಿ. ದೇವರಾಜ ಅರಸ್.—ಒಂದೊಂದು ಸಾರಿ ಒಂದೊಂದು ಪತ್ರಿಕೆಗಳಲ್ಲಿ ಒಂದೊಂದು ವರದಿ ಬರುವುದರಿಂದ ಈ ತರಹ ಅನುಮಾನ ಬರುವುದಕ್ಕೆ ಕಾರಣವಾಗಿದೆ. ನಾನು ಪತ್ರಿಕೆಯನ್ನು ನೋಡಿದೆ. ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಸದಸ್ಯರು ಇದರ ಬಗ್ಗೆ ಮಾತನಾಡುವ ಅಗತ್ಯ ಇರಲಿಲ್ಲ, ಯಾವ ಸಂದರ್ಭಕ್ಕೆ ಏನು ಹೇಳಿದರೋ, ರಿಪೋರ್ಟರ್ಸ್ ಏನು ಬರೆದುಕೊಂಡರೋ ಆ ಸಂದರ್ಭ ನನಗೆ ಗೊತ್ತಿಲ್ಲ. ಏನೇ ಆದರೂ ಓದಿದವರಿಗೆ ಹಾಗೆಯೇ ಕಾಣುತ್ತದೆ. ತಾವು ಆಗ್ರಿಮೆಂಟ್ ಏನು ಇದೆ ಎಂಬುದನ್ನು ಪತ್ರಿಕೆಯಲ್ಲಿ ಓದಿದ್ದೀರಿ ಎಂದು ಕಾಣುತ್ತದೆ. I have got a copy of it with me. ಮೂರು ಜನರು ಸೈನ್ ಮಾಡಿದ್ದು, ಒಬ್ಬೊಬ್ಬರ ಹತ್ತಿರ ಒಂದೊಂದು ಕಾಪಿ ಇಟ್ಟುಕೊಂಡಿದ್ದೇವೆ, ನನ್ನ ಸಿಗ್‌ನೇಚರ್ ಇದೆ, ಕೇರಳ ಮತ್ತು ತಮಿಳು ನಾಡು ಚೀಫ್ ಮಿನಿಸ್ಟರ್ ಮತ್ತು ಶ್ರೀ ಕೆ. ಎಲ್. ರಾವ್ ಅವರು ರುಜು ಹಾಕಿರುವುದನ್ನು ತಮ್ಮ ಕೈಯಲ್ಲಿ ಕೊಡುತ್ತೇನೆ, ಅದನ್ನು ತಾವು ನೋಡಿಕೊಳ್ಳಬಹುದು. We go by this only. ಊಹೆ ಮಾಡಿ ಹೇಳಿದರೆ ಏನು ಮಾಡುವುದಕ್ಕೂ ಆಗುವುದಿಲ್ಲ. I shall read the last para :

> "The Union Government will assist in arriving at such a settlement in six months and in the meanwhile no State should take any steps to make the solution of the problem difficult either by impounding or by utilising the water of Cauvery beyond what it is at present."

We are not impounding; nor are we utilising the water of Cauvery beyond what it is at present, until these projects are complete.

ಇಷ್ಟೇ ಇದರಲ್ಲಿರುವುದು. ಯಾರೋ ಏನೋ ವಾಖ್ಯಾನ ಮಾಡಿಕೊಂಡು ಹೋದರೆ ಅದರಿಂದ ಏನು ಆಗಬೇಕು ! ನಮ್ಮ ಕೆಲಸಕ್ಕೆ ಕುಂಠಿತವಾಗಬೇಕಾಗಿಲ್ಲ. ಯಾರೂ ಕೆಲಸಗಳನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅವರ ಜೊತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಯಾರು ಏನು ಮಾಡಿದರೂ ಮೈಸೂರು ಸರ್ಕಾರ ಕೆಲಸ ಮಾಡುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಇಲ್ಲಿಯವರೆಗೆ ಲೀಗಲ್ಲಾಗಿ ಕಾನ್‌ಸ್ಟಿಟ್ಯೂಟ್ ಆಗಿರತಕ್ಕ ಅಗ್ರಿಮೆಂಟ್ ಮೇಲೆ ಕಾನೂನು ರೀತ್ಯ ತಮ್ಮ ವರ್ತಿಕ್ಟನ್ನು ಕೊಡತಕ್ಕ ಯಾವುದೇ ಒಂದು ಇನ್‌ಸ್ಟಿಟ್ಯೂಷನ್ ಅಥವಾ ಫ್ಯಾಕ್ಟ್ ಫೈಂಡಿಂಗ್ ಬಾಡಿ ಏನು ಹೇಳಬೇಕೋ ಆ ಹೇಳಿಕೆಯಾಗಲಿ, ಆಜ್ಞೆಯಾಗಲಿ ಇಲ್ಲದೆ ಇರುವಾಗ ಮೈಸೂರು ಸರ್ಕಾರ ತನ್ನ ಕಾರ್ಯವನ್ನು ಮಾಮೂಲಿನಂತೆ ನಡೆಸಿಕೊಂಡು ಹೋಗುವುದು ಅದರ ಸ್ಪಷ್ಟವಾದ ಕರ್ತವ್ಯ. ಕೆಲಸ ನಿಲ್ಲಿಸಿ ಎಂದು ಯಾರೂ ಏನು ಹೇಳಿದರೂ ಅದಕ್ಕೆ ಬೆಲೆ ಕೊಡಬೇಕಾಗಿಲ್ಲ. We go by it to the letter of the law. ಅದಕ್ಕೆ ಬೇರೆ ವ್ಯಾಖ್ಯಾನ ಮಾಡಬೇಕಾದ ಅಗತ್ಯ ಇಲ್ಲ.

Notice of a Question of Privilege over the incorrect statement made by the Minister for Municipal Administration on the purchase of Begum Mahal by the Bangalore City Corporation.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ನಗರಾಡಳಿತ ಮಂತ್ರಿಗಳಿಗೆ ಸಂಬಂಧ ಪಟ್ಟ ಎರಡು ಪ್ರಶ್ನೆಗಳು ಉಳಿದುಹೋಗಿವೆ. ಅವುಗಳನ್ನು ಡಿಮ್ಯಾಂಡ್ಸ್ ಚರ್ಚೆ ಮಾಡುವ ಕಾಲದಲ್ಲಿ ತೆಗೆದುಕೊಂಡರೆ ಸಭೆಯ ಕಾಲ ವ್ಯರ್ಥವಾಗುತ್ತದೆ ಎಂದು ಆಗ ಕೇಳಲಿಲ್ಲ. ಮಂತ್ರಿ